ಆ) ತುಂಗಾ ಮೇಲ್ದಂಡೆ ಯೋಜನೆಯನ್ನು 2007 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ) ತುಂಗಾ ಮೇಲ್ದಂಡೆ ಯೋಜನೆಯಡಿ ಹಾವೇರಿ ಜಿಲ್ಲೆಯ 25,737 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ.

357 (401) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲಾದ ಏತ ನೀರಾವರಿ ಯೋಜನೆಗಳೆಷ್ಟು?

ಆ) ಇವುಗಳಲ್ಲಿ ಎಷ್ಟು ಚಾಲ್ತಿಯಲ್ಲಿರುತ್ತವೆ?

ಇ) ಸ್ಥಗಿತಗೊಂಡಿರುವ ಏತ ನೀರಾವಿರ ಯೋಜನೆಗಳ ಮರು ಚಾಲನೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಹಾವೇರಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 6 ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದ್ದು ಅವುಗಳ ವಿವರಗಳು ಈ ಕೆಳಕಂಡಂತಿವೆ.

1. ಬಸಾಪುರ ಏತ ನೀರಾವರಿ ಯೋಜನೆ (ಪ್ರಗತಿಯಲ್ಲಿದೆ)
2. ಅಗಸನಮಟ್ಟಿ ಏತ ನೀರಾವರಿ ಯೋಜನೆ (ಕಾರ್ಯ ನಿರ್ವಹಿಸುತ್ತಿದೆ)
3. ಗಳಗನಾಥ ಏತ ನೀರಾವರಿ ಯೋಜನೆ (ಸ್ಥಗಿತಗೊಂಡಿದೆ)
4. ಮೇವುಂಡಿ ಏತ ನೀರಾವರಿ ಯೋಜನೆ (ಸ್ಥಗಿತಗೊಂಡಿದೆ)
5. ಹಾವನೂರು ಏತ ನೀರಾವರಿ ಯೋಜನೆ (ಸ್ಥಗಿತಗೊಂಡಿದೆ)
6. ಗೌರಾಪೂರ ಏತ ನೀರಾವರಿ ಯೋಜನೆ (ಪ್ರಗತಿಯಲ್ಲಿದೆ)

ಆ) ಅಗಸನಮಟ್ಟಿ ಏತ ನೀರಾವರಿ ಯೋಜನೆ ಮಾತ್ರ ಚಾಲ್ತಿಯಲ್ಲಿರುತ್ತದೆ.

ಇ) ಸ್ಥಗಿತಗೊಂಡಿರುವ 3 ಸಣ್ಣ ನೀರಾವರಿ ಇಲಾಖೆಯ ಏತ ನೀರಾವರಿ ಯೋಜನೆಗಳಿಗೆ ಮರು ಚಾಲನೆ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

358 (402) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕಿನ ವರದಾ ನದಿಗೆ ಕಟ್ಟಿರುವ ಅನೇಕ ಬ್ಯಾರೇಜುಗಳು ದುರಸ್ಥಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ದುರಸ್ಥಿ ಮಾಡಿಸಲು ಯೋಜನೆ ರೂಪಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) ಬಂದಿದೆ.

ಆ) ಇಲ್ಲ.